## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 2034/21

**ಸಾಕ್ಷಿಯನ್ನು ದಿಃ 05.08.2024 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

| | | | |
|---|---|---|---|
| ಹೆಸರು | ಆಕಾಶ್ ಪವಾರ್ | ಸಿ.ಡಬ್ಲ್ಯೂಃ 2 | ಪಿ.ಡಬ್ಲ್ಯೂಃ 1 |
| ತಂದೆಯ ಹೆಸರು | ಗಣೇಶ್ ರಾವ್ | | |
| ವಯಸ್ಸು | 29 ವರ್ಷ | | |
| ಕೆಲಸ | ಕೂಲಿ | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. ಚಾಸಾ-1, 3 ಹಾಗೂ 4 ರವರ ಪರಿಚಯ ಇಲ್ಲ. ಚಾಸಾ-5 ರವರ ಪರಿಚಯ ಇದೆ. ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ಇದೆ. ದಿಃ 31.01.2017 ರಂದು ನನ್ನ ಹೆಸರಿನ ಫೇಸ್ ಬುಕ್ ಅಕೌಂಟ್ akashpavar@gmial.com ಖಾತೆಯನ್ನು ಯಾರೋ ಫೇಕ್ ಮಾಡಿ ಮೆಕ್ಕಾ ಮದೀನದಲ್ಲಿ ನಮಾಜ್ ಮಾಡುವ ಒಂದು ಚಿತ್ರವನ್ನು ಹಂದಿ ಹತ್ತುತ್ತಿರುವ ಹಾಗೆ ಎಡಿಟ್ ಮಾಡಿ, ಮುಸ್ಲಿಂ ಹುಡುಗರಿಗೆ ಸದರಿ ಚಿತ್ರವನ್ನು ಟ್ಯಾಗ್ ಮಾಡಿ ಪೋಸ್ಟ್ ಮಾಡಿರುತ್ತಾರೆ. ಅದೇ ದಿನ ದಿಃ 31.01.2017 ರಂದು ಪೊಲೀಸರು ನನ್ನನ್ನು ದಸ್ತಗಿರಿ ಮಾಡಿದರು. ದಿಃ 22.02.2017 ರವರೆಗೆ ನ್ಯಾಯಾಂಗ ಬಂಧನದಲ್ಲಿದ್ದು ಜಾಮೀನಿನ ಮೇರೆಗೆ ಬಿಡುಗಡೆ ಹೊಂದಿರುತ್ತೇನೆ.

2. ನಂತರ ದಿಃ 03.03.2017 ರಂದು ಪೊಲೀಸರು ನನ್ನನ್ನು ಹುಣಸೂರು ಪಟ್ಟಣ ಠಾಣೆಗೆ ಬರಲು ಸೂಚಿಸಿದ ಮೇರೆಗೆ ನಾನು ಅಲ್ಲಿಗೆ ಹೋದಾಗ ನ್ಯಾಯಾಲಯದ ಮುಂದಿರುವ ಆರೋಪಿಯು ಹಾಜರಿದ್ದನು. ನಿನ್ನ ಹೆಸರಿನ ಫೇಕ್ ಅಕೌಂಟ್ ಅನ್ನು ಕ್ರಿಯೇಟ್ ಮಾಡಿರುವುದು ಇವನೇ ಎಂದು ಸದರಿ ಆರೋಪಿಯನ್ನು ತೋರಿಸಿದರು. ಮನೆ ತೆಗೆದುಕೊಳ್ಳುವ ವಿಚಾರದಲ್ಲಿ ನನ್ನ ತಂದೆ ತಾಯಿಗೂ ಹಾಗೂ ಆರೋಪಿತನ ತಂದೆ ತಾಯಿಗೂ ವೈಮನಸ್ಯವಿತ್ತು. ದಿಃ 31.01.2017 ರಂದು ನನಗೆ ಏನಾದರೂ ಮಾಡಬೇಕೆಂದು ಆರೋಪಿಯು ಮಾರಿಗುಡಿ ಬೀದಿಯಲ್ಲಿ ನನಗೂ ಹಾಗೂ ಆರೋಪಿತನಿಗೂ ಜಗಳ ಆಯಿತು. ಆರೋಪಿಯು ನ್ಯೂಕೇಂಬ್ರೀಡ್ಜ್ ಪಬ್ಲಿಕ್ ಶಾಲೆಯಲ್ಲಿ ಕಂಪ್ಯೂಟರ್ ಟೀಚರ್ ಆಗಿದ್ದರು. ಶಾಲೆಯಲ್ಲಿರುವ ಕಂಪ್ಯೂಟರ್ ಸಿಸ್ಟಮ್ ನಿಂದ akashpavar@gmial.com ಸುಳ್ಳು ಖಾತೆಯನ್ನು ಆರೋಪಿತನು ಕ್ರಿಯೇಟ್ ಮಾಡಿ ನಾನು ಹಾಗೂ ನನ್ನ ಸ್ನೇಹಿತನಾದ

ಚಾಸಾ–5 ರವರು ರಾಜಶೀಟ್ ನಲ್ಲಿ ಫೋಟೋ ತೆಗೆದುಕೊಂಡಿದ್ದೇವು. ಆರೋಪಿ ಚಾಸಾ–5 ರವರಿಗೆ ಫ್ರೆಂಡ್ ರಿಕ್ವೆಸ್ಟ್ ಕಳುಹಿಸಿ ಚಾಸಾ–5 ರವರ ಪ್ರೊಫೈಲ್ ಸ್ಕ್ರಿನ್ ಶಾಟ್ ತೆಗೆದುಕೊಂಡು ಮೆಕ್ಕಾ ಮದೀನದಲ್ಲಿ ನಮಾಜ್ ಮಾಡುವಾಗಿ ಹಂದಿ ಹತ್ತುವಂತೆ ಎಡಿಟ್ ಮಾಡಿ ಮುಸ್ಲಿಂ ಹುಡುಗರಿಂದ ಹೊಡೆಸಬೇಕು ಎಂದು ಈ ರೀತಿ ಟ್ಯಾಗ್ ಮಾಡಿರುತ್ತಾರೆ ಎಂದು ನನಗೆ ಪೊಲೀಸರು ತಿಳಿಸಿದರು. ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ ಈ ಮೇಲಿನ ವಿಚಾರವನ್ನು ನನ್ನ ಹೇಳಿಕೆಯಲ್ಲಿ ನೀಡಿರುತ್ತೇನೆ.

## <u>ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಬಿ.ಎಸ್. ವೈ ಅವರಿಂದ–</u>

3. ಆರೋಪಿ ಹಾಗೂ ನಮ್ಮ ಮನೆ ಅಕ್ಕಪಕ್ಕದಲ್ಲಿ ಇವೆ ಎಂದರೆ ಸರಿ. ಅಕ್ಕಪಕ್ಕದಲ್ಲಿ ಮನೆ ಕಟ್ಟಿಕೊಳ್ಳುವಾಗಿನಿಂದಲೂ ನಮ್ಮ ಕುಟುಂಬಗಳ ಮಧ್ಯೆ ಬಹಳ ಹಿಂದಿನಿಂದಲೂ ದ್ವೇಷ ಇದೆ ಎಂದರೆ ಸರಿ. ನನ್ನ ಮೊಬೈಲ್ ನಲ್ಲಿ ನನ್ನ ಫೇಸ್ ಬುಕ್ ಅಕೌಂಟ್ akashpavar24061986@gmial.com ಖಾತೆ ಇರುತ್ತದೆ.

4. ನಾನು ನನ್ನ ಫೇಸ್ ಬುಕ್ ಖಾತೆಯಿಂದ ಬೇರೆಯವರಿಗೆ ಮೇಸೆಜ್ ಕಳುಹಿಸುವುದು ಚಾಟ್ ಮಾಡುತ್ತಿರುತ್ತೇನೆ ಎಂದರೆ ಸರಿ. ಆದ್ದರಿಂದ ನನ್ನ ಫೇಸ್ ಬುಕ್ ಖಾತೆಯಲ್ಲಿ ಬಹಳಷ್ಟು ಸ್ನೇಹಿತರು ಇದ್ದಾರೆ ಎಂದರೆ ಸರಿ. ಸುಮಾರು 10 ಜನ ಸ್ನೇಹಿತರು ಇರಬಹುದು. ಆರೋಪಿ ಹಾಗೂ ನನ್ನ ನಡುವೆ ಫೇಸ್ ಬುಕ್ ಚಾಟ್ಸ್ ಇರುವುದಿಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಆರೋಪಿ ಎಸಗಿದ್ದಾರೆ ಎನ್ನಲಾದ ಕೃತ್ಯದ ವಿಚಾರವನ್ನು ನನಗೆ ಪೊಲೀಸರು ತಿಳಿಸಿರುತ್ತಾರೆ ಎಂದರೆ ಸರಿ.

5. ಆರೋಪಿ ಎಲ್ಲಿ ಹಾಗೂ ಏನೂ ಕೆಲಸ ಮಾಡುತ್ತಾರೆ ಎಂಬುದನ್ನು ನಾನು ಪೊಲೀಸರ ಮುಂದೆ ಹೇಳಿಕೆ ನೀಡುವ ಪೂರ್ವದಲ್ಲಿ ನನಗೆ ತಿಳಿದಿರಲಿಲ್ಲ ಎಂದರೆ ಸರಿಯಲ್ಲ. ಹೇಗೆ ತಿಳಿದಿತ್ತು ಎಂದರೆ ನಾನು ಅದೇ ಕೆಂಬ್ರೀಡ್ಜ್ ಶಾಲೆಯಲ್ಲಿ ವಿದ್ಯಾರ್ಥಿ ಆಗಿದ್ದೆ ಆದ್ದರಿಂದ ನನಗೆ ಮೊದಲೇ ತಿಳಿದಿತ್ತು. ನನ್ನ ಹೇಳಿಕೆಯಲ್ಲಿ ಈ ವಿಚಾರವನ್ನು ನಾನು ಹೇಳಿದ್ದೆ. ನಾನು ಪೊಲೀಸರ ಮುಂದೆ ನೀಡಿದ್ದೆ ಎಂದು ಹೇಳಿರುವ ಹೇಳಿಕೆಯಲ್ಲಿ ಈ ವಿಚಾರ ನಮೂದಾಗಿಲ್ಲ ಎಂದರೆ ಸರಿ.

6. ಪೊಲೀಸರು ಹೇಳಿರುವ ಹೇಳಿಕೆಯನ್ನು ಹೊರತುಪಡಿಸಿ ಸದರಿ ಫೇಸ್ ಬುಕ್ ಅಕೌಂಟ್ ಮೊಬೈಲ್ ನಲ್ಲಿ ಕ್ರಿಯೇಟ್ ಆಗಿದೆಯಾ, ಕಂಪ್ಯೂಟರ್ ನಲ್ಲಿ ಆಗಿದೆಯಾ ಅಥವಾ

ಯಾವುದಾದರೂ ಸಿಸ್ಟಮ್ ನಲ್ಲಿ ಕ್ರಿಯೇಟ್ ಆಗಿದೆಯಾ ಎಂಬ ವಿಚಾರ ನನಗೆ ತಿಳಿದಿರಲಿಲ್ಲ ಹಾಗೂ ಈಗಲೂ ತಿಳಿದಿಲ್ಲ ಎಂದರೆ ಸರಿ. ಪೊಲೀಸರು ಪ್ರಸ್ತುತ ಪ್ರಕರಣ ದಾಖಲು ಮಾಡಿದಾಗ ನಾನು 2 ನೇ ಆರೋಪಿ ಆಗಿದ್ದೆ ಎಂದರೆ ಸರಿ. ಆ ನಂತರದಲ್ಲಿ ಪೊಲೀಸರು ನಾನು ಹೇಳಿಕೊಟ್ಟಂತೆ ನೀವು ಹೇಳಿದರೆ, ನಿಮ್ಮನ್ನು 2 ನೇ ಆರೋಪಿ ಸ್ಥಾನದಿಂದ ಕೈ ಬಿಡುತ್ತೇವೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣಕ್ಕೂ, ಆರೋಪಿಗೂ ಹಾಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ, ಆಗ ನನ್ನ ತಂದೆ ಹೆಸರು ಗಣೇಶ್ ರಾವ್ ಎಂದು ನುಡಿದಿರುತ್ತೇನೆ. ಸದರಿ ಹೇಳಿಕೆಯಲ್ಲಿ ನನ್ನ ತಂದೆ ಹೆಸರು ಗಣೇಶ್ ರಾವ್ ಎಂದು ನಮೂದಾಗಿಲ್ಲ ಎಂದರೆ ಸರಿ. ಪೊಲೀಸರೇ ಹೇಳಿಕೆಯಲ್ಲಿ ಬರೆದುಕೊಂಡು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಪ್ರಸ್ತುತ ಪ್ರಕರಣಕ್ಕೂ ಹಾಗೂ ಆರೋಪಿಗೂ  ಯಾವುದೇ ಸಂಬಂಧವಿಲ್ಲ, ಪೊಲೀಸರ ಪ್ರಚೋದನೆಯಿಂದ ಅವರು ನನ್ನನ್ನು ಆರೋಪಿ ಸ್ಥಾನದಿಂದ ಕೈಬಿಡುತ್ತಾರೆ ಎಂದು ಹೇಳಿದ್ದರಿಂದ ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದಲ್ಲಿ ನನ್ನನ್ನು ಆರೋಪಿ ಸ್ಥಾನದಿಂದ ಕೈಬಿಡಿ ಎಂದು ಮಾನ್ಯ ಉಚ್ಚ ನ್ಯಾಯಾಲಯಕ್ಕೂ ಸಹ ಹೋಗಿದ್ದೆ ಎಂದರೆ ಸರಿ.

**ಮುಂದುವರಿದ ಪಾಟೀಸವಾಲುಃ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.